# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1034 |
| ಸದಸ್ಯರ ಹೆಸರು | : | ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 18.12.2024 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಮಾರತ್‌ಹಳ್ಳಿ ಹೋಬಳಿ, ಭೈರಸಂದ್ರ ಗ್ರಾಮದ ಸರ್ವೆ ನಂ.64ರಲ್ಲಿ ಎಷ್ಟು ಗುಂಟೆ ಸರ್ಕಾರಿ ಮತ್ತು ಖಾಸಗಿಯವರಿಗೆ ಸೇರಿದ ಜಾಗವಿದೆ; (ಸಂಪೂರ್ಣ ಮಾಹಿತಿ ಒದಗಿಸುವುದು) | ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಮಾರತ್ತಹಳ್ಳಿ ಹೋಬಳಿ, ಭೈರಸಂದ್ರ ಗ್ರಾಮದ ಸ.ನಂ.64 ರ ಹಾಲಿ ಪಹಣಿ ಕಾಲಂ (3) ರಂತೆ ಒಟ್ಟು 0-25 ಗುಂಟೆ ಈ ಪೈಕಿ 0-08 ಗುಂಟೆ "ಬಿ" ಖರಾಬು, ಜಾತಾ ಉಳಿಕೆ 0-17 ಗುಂಟೆ ಉಳಿಕೆ ವಿಸ್ತೀರ್ಣ ಇರುತ್ತದೆ. ಪಹಣಿ ಕಾಲಂ (9) ರಲ್ಲಿ ಸರ್ಕಾರಿ ಕುಂಟೆ ಹೆಸರಿನಲ್ಲಿ 0-25 ಗುಂಟೆ ಜಮೀನನ್ನು ವಿಶೇಷ ಜಿಲ್ಲಾಧಿಕಾರಿಗಳವರ ಪತ್ರ ಸಂ:ಆರ್.ಆರ್.ಟಿ (2) (ಇ) ಸಿಆರ್:04/10-11, ದಿನಾಂಕ:07-07-2012 ರಂತೆ ಶ್ರೀ ಅಶ್ವಥಪ್ಪ ಬಿನ್ ಮುನಿಕರಿಯಪ್ಪ ರವರ ಹೆಸರನ್ನು ತೆಗೆದು ಸರ್ಕಾರಿ ಕುಂಟೆ ಎಂದು ಎಂ.ಆರ್:14/2010-11, ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರ ಪ್ರಕರಣ ಸಂ:ರಿವಿಷನ್ ಪಿಟಿಷನ್:83/06-07, ದಿ:21/07/2010 ರಂತೆ ಸರ್ಕಾರದ ವಶಕ್ಕೆ ಪಡೆಯಲು ಆದೇಶಿಸಿರುವಂತೆ ಎಂ.ಆರ್.ಹೆಚ್.3/12-13 ರಂತೆ ನಮೂದಾಗಿರುತ್ತದೆ.<br><br>ಸದರಿ ಜಮೀನಿನ ಒತ್ತುವರಿ ಕುರಿತು ತಯಾರಿಸಿರುವ ನಕ್ಷೆಯಂತೆ 0-02.12 ಗುಂಟೆ ಪ್ರದೇಶದಲ್ಲಿ ಪ್ರೇಮನಾದನ್, ಶರಣ್ಯ, ಮೋಹನ್, ಸಂದೀಪ್ ಕುಮಾರ್, ಸತೀಶ್ ರವರು ಮನೆ ನಿರ್ಮಿಸಿದ್ದು, 0-01 ಗುಂಟೆ ಜಮೀನಿನಲ್ಲಿ ಪ್ರಕಾಶ್ ರವರು ಮನೆ ನಿರ್ಮಿಸಿದ್ದು, 0-01 ಗುಂಟೆ ಪ್ರದೇಶದಲ್ಲಿ ಸುದರ್ಶನ್ ರವರು ಮನೆ ನಿರ್ಮಿಸಿದ್ದು, 0-00.08 ಗುಂಟೆ ಜಮೀನಿನಲ್ಲಿ ಮುನೇಶ್ವರ ದೇವಸ್ಥಾನ, 0-04.04 ಗುಂಟೆ ಜಮೀನಿನಲ್ಲಿ ಸಾರ್ವಜನಿಕ ರಸ್ತೆ ಇದ್ದು, 0-15.08 ಗುಂಟೆ ಪ್ರದೇಶ ಖಾಲಿ ಇರುತ್ತದೆ. |
| ಆ) | ಈ ಸರ್ವೆ ನಂಬರ್‌ನಲ್ಲಿರುವುದು ಗೋಮಾಳ ಜಮೀನೋ ಅಥವಾ ಹಿಡುವಳಿ ಜಮೀನೋ ಅಥವಾ ಯಾವ ವರ್ಗಕ್ಕೆ ಸೇರಿದ ಜಮೀನಾಗಿದೆ ಎಂಬುದರ ಬಗ್ಗೆ ವಿವರಣೆಯೊಂದಿಗೆ ಮಾಹಿತಿ ಒದಗಿಸುವುದು. | ಸದರಿ ಭೈರಸಂದ್ರ ಗ್ರಾಮದ ಸ.ನಂ.64 ರ ಸರ್ವೆ ದಾಖಲೆಗಳಂತೆ, ಈ ಹಿಂದೆ ಒಟ್ಟು ವಿಸ್ತೀರ್ಣ 0-25 ಗುಂಟೆ ಇದ್ದು ಈ ಪೈಕಿ 0-08 ಗುಂಟೆ "ಬಿ" ಖರಾಬು ಜಾತಾ ಉಳಿಕೆ 0-17 ಗುಂಟೆ ಉಳಿಕೆ ವಿಸ್ತೀರ್ಣವನ್ನು ಕರ್ದಾದಾರರಾದ ಜಿ.ಎಂ.ಅಶ್ವಥಯ್ಯ ಬಿನ್ ಮುನಿಕರಿಯಪ್ಪ ರವರ ಹೆಸರಿಗೆ ಇನಾಂ ರದ್ದಿಯಾತಿ |

| | | |
|---|---|---|
| ಇ) | ಸದರಿ ಸರ್ವೆ ನಂಬರ್‌ನಲ್ಲಿರುವ ಜಾಗವನ್ನು ಯಾರಿಗಾದರೂ ಮಂಜೂರು ಮಾಡಲಾಗಿದೆಯೇ; ಮಾಡಿದ್ದಲ್ಲಿ ಸಂಪೂರ್ಣ ದಾಖಲೆಗಳೊಂದಿಗೆ ಮಾಹಿತಿ ಒದಗಿಸುವುದು. | ವಿಶೇಷ ಜಿಲ್ಲಾಧಿಕಾರಿಗಳವರ ಕೇಸ್ ನಂ:ಐ.ಎನ್.ಎ.ಪಿ.ಆರ್.137/64-65, ದಿನಾಂಕ:07/04/1966 ರಂತೆ ರಂ.ಆರ್.01/88-89 ರಂತೆ ಖಾತೆ ದಾಖಲಾಗಿರುವುದು ಕೈಬರಹದ ಪಹಣಿ, ಐ.ಎಲ್-ಆರ್.ಆರ್. ಸರ್ವೆ ದಾಖಲೆಗಳಂತೆ ಕಂಡುಬಂದಿರುತ್ತದೆ. ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರ ಪ್ರಕರಣ ಸಂ:ರಿವಿಷನ್ ಪಿಟಿಷನ್ ಸಂ:83/06-07 ರಂತೆ ಶ್ರೀ.ಅಶ್ವಥಪ್ಪ ರವರು ಉಪವಿಭಾಗಾಧಿಕಾರಿಗಳ ಆದೇಶ ಸಂ:ಆರ್.ಎ.184/2004-05 ದಿನಾಂಕ:21/02/2006ರಆದೇಶವನ್ನು ಪ್ರಶ್ನಿಸಿ ಮೇಲ್ಮನವಿಯನ್ನು ದಾಖಲಿಸಿದ್ದು, ಮೇಲ್ಕಂಡ ಪ್ರಕರಣದ ದಿನಾಂಕ:21/07/2010ರ ಆದೇಶದಂತೆ, ಜಮೀನು ಸದರಿ ಸರ್ಕಾರಿ ಕುಂಟೆ ಎಂದು ವರ್ಗೀಕೃತವಾಗಿರುವುದರಿಂದ, ಒತ್ತುವರಿಯನ್ನು ತೆರವುಗೊಳಿಸಿ, ಸಂರಕ್ಷಿಸಲು ಆದೇಶಿಸಿರುತ್ತಾರೆ. ನಂತರದಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 136(3) ರಡಿ ವಿಚಾರಣೆ ನಡೆಸಿ ಆರ್. ಆರ್.ಟಿ(2)(ಇ)ಸಿಆರ್:04/10-11 ದಿನಾಂಕ::07/07/2012 ರಂತೆ ಹೊರಡಿಸಿರುವ ಆದೇಶದಲ್ಲಿ ಪ್ರಸ್ತಾಪಿತ ಜಮೀನಿನ ಮಂಜೂರಾತಿ ಅನುಮಾನಾಸ್ಪದವಾಗಿ ಕಂಡುಬಂದಿದ್ದು, ಜಮೀನಿನಲ್ಲಿ ಕುಂಟೆಯಿದ್ದು, ಮಂಜೂರಾತಿ ಪ್ರಶ್ನೆ ಬರುವುದಿಲ್ಲವಾದ್ದರಿಂದ, ಅಶ್ವಥಪ್ಪ ರವರ ಹೆಸರನ್ನು ರದ್ದುಪಡಿಸಿ, ಸರ್ಕಾರ ಎಂದು ನಮೂದಿಸಲು ಆದೇಶಿಸಿರುವಂತೆ ಸರ್ಕಾರಿ ಕುಂಟೆ ಎಂದು ಎಂ.ಆರ್:14/2010-11 ರಂತೆ ನಮೂದಿಸಲಾಗಿರುತ್ತದೆ. ಸದರಿ ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರ ಪ್ರಕರಣ ಸಂ:ರಿವಿಷನ್ ಪಿಟಿಷನ್:83/ 06-07, ದಿ:21/07/2010 ರಂತೆ ಸರ್ಕಾರದ ವಶಕ್ಕೆ ಪಡೆಯಲು ಆದೇಶಿಸಿರುವಂತೆ ಎಂ.ಆರ್.ಹೆಚ್.3/12-13 ರಂತೆ ಪಹಣಿ ಕಾಲಂ (11) ರಲ್ಲಿ ನಮೂದಿಸಲಾಗಿರುತ್ತದೆ .ವಿಶೇಷ ಜಿಲ್ಲಾಧಿಕಾರಿಗಳವರ ಆದೇಶದಂತೆ ಕುಂಟೆ ಎಂದು ವರ್ಗೀಕರಣಗೊಂಡ ಜಮೀನಾಗಿರುತ್ತದೆ. |
| ಈ) | ಸರ್ವೆ ನಂಬರ್ 64ರಲ್ಲಿರುವ ಜಮೀನು ಸರ್ಕಾರಕ್ಕೆ ಸೇರಿದ್ದರೆ, ಈ ಜಾಗವನ್ನು ಸಂರಕ್ಷಣೆ ಮಾಡಲು ಸರ್ಕಾರ ಯಾವ ರೀತಿ ಕ್ರಮಗಳನ್ನು ಕೈಗೊಂಡಿದೆ? (ವಿವರಣೆ ನೀಡುವುದು) | ಸದರಿ ಜಮೀನು ಕುಂಟೆ ಎಂದು ವರ್ಗೀಕೃತವಾಗಿರುವುದರಿಂದ, ಒತ್ತುವರಿಯನ್ನು ತೆರವುಗೊಳಿಸಿ, ಸಂರಕ್ಷಿಸಲು ಆದೇಶಿಸಿರುವಂತೆ ದಿನಾಂಕ:02/11/2010 ರಂದು ಆರಕ್ಷಕ ನಿರೀಕ್ಷಕರು, ಬೈಯಪ್ಪನಹಳ್ಳಿ ಪೊಲೀಸ್ ಠಾಣೆ ರವರಿಗೆ ಒತ್ತುವರಿದಾರರ ವಿರುದ್ಧ ಕಾನೂನು ರೀತ್ಯ ಕ್ರಮಕ್ಕೈಗೊಳ್ಳಲು ಕೋರಲಾಗಿ, ಎಫ್.ಐ.ಆರ್. ನಂ.0321, ದಿ:04/11/2010 ರಂತೆ ಬೈಯಣ್ಣ, ಚಂದ್ರಶೇಖರ್, ಲಿಂಗೇಗೌಡ ರವರುಗಳ ವಿರುದ್ಧ |

| | | |
|---|---|---|
| | | ದಾಖಲಿಸಿರುವುದು ಕಂಡುಬಂದಿರುತ್ತದೆ. ಮೇಲ್ಕಂಡ ಜಮೀನಿಗೆ ಸಂಬಂಧಿಸಿದಂತೆ, ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯ, ಮೇಯೋ ಹಾಲ್ ನಲ್ಲಿ ಓ.ಎಸ್:27106/2007, ಮಾನ್ಯ ಉಚ್ಚ ನ್ಯಾಯಾಲಯದಲ್ಲಿಡಬ್ಲ್ಯೂ.ಪಿ.:28736/2010, 36681/2010, 36174/2012, ಆರ್.ಎಫ್.ಎ: 656/2016 ರಂತೆ ಪ್ರಕರಣಗಳು ವಿಚಾರಣೆಯಲ್ಲಿದ್ದು, ಸದರಿ ಪ್ರಕರಣಗಳಿಗೆ ಈಗಾಗಲೇ ಮಾಹಿತಿ/ದಾಖಲೆಗಳನ್ನು ಸಲ್ಲಿಸಲಾಗಿರುತ್ತದೆ. ಇದೇ ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಎಲ್.ಜಿ.ಸಿ(ಪಿ):315/2019 ರಂತೆ ಪ್ರಕರಣ ದಾಖಲಾಗಿದ್ದ ಮೇರೆಗೆ ವಾಸ್ತವಾಂಶವನ್ನು ವರದಿ ಮಾಡಲಾಗಿರುತ್ತದೆ. ಪ್ರಶ್ನಿತ ಜಮೀನಿನ ಒತ್ತುವರಿಗೆ ಸಂಬಂಧಿಸಿದಂತೆ ಒತ್ತುವರಿ ನಕ್ಷೆಯಲ್ಲಿ ಗುರುತಿಸಿರುವ ಒತ್ತುವರಿದಾರರಿಗೆ ಸಂಬಂಧಿಸಿದಂತೆ ನೀಡಿರುವ ಎಲ್ಲಾ ಬಿಬಿಎಂಪಿ ಖಾತೆಯನ್ನು ರದ್ದುಪಡಿಸಿ ಹಾಗೂ ಖುಲ್ಲಾ ಇರುವ 0-15.08 ಗುಂಟೆ ಜಮೀನನ್ನು ಕುಂಟೆಯ ರೂಪದಲ್ಲಿ ಅಭಿವೃದ್ಧಿಪಡಿಸಿ, ಸಂರಕ್ಷಿಸಲು ಕೋರಿ ಜಂಟಿ ಆಯುಕ್ತರು, ಬೆಂಗಳೂರು ಪೂರ್ವ ವಲಯ, ಬಿಬಿಎಂಪಿ ಇವರಿಗೆ ದಿನಾಂಕ:24/09/2021 ರಂದು ಪತ್ರ ಬರೆಯಲಾಗಿರುತ್ತದೆ. |

ಸಂಖ್ಯೆ: ಆರ್‌ಡಿ 135 ಎಲ್‌ಜಿಕ್ಯೂ 2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು